೯೦

ಉಪತಹಶೀಲ್ದಾರವರ ನ್ಯಾಯಾಲಯ ನಾಡ ಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾ.ಕ.ಹೊ/88/2015-16 ದಿನಾಂಕ:05-04-2016

| ಅರ್ಜಿದಾರರು | ತಕರಾರುದಾರರು |
|---|---|
| 1)ಮಾಳ್ಗಿ ಚಂದ್ರಪ್ಪ ತಂದೆ ಲೇಟ್ ಮಾಳ್ಗಿ ಸಿದ್ದಪ್ಪ<br>2)ಮಾಳ್ಗಿ ಭೀಮಪ್ಪ ತಂದೆ ಲೇಟ್ ಮಾಳ್ಗಿ ಸಿದ್ದಪ್ಪ<br>3)ಚೌಡಮ್ಮ ಗಂಡ ಹನುಮಪ್ಪ<br>ದಾಸರೋಬನಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು | ಗೋವಿಂದಪ್ಪ ತಂದೆ ನಂಜುಂಡಪ್ಪ<br>ಟಿ.ಕಲ್ಲಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಹಿರೇಕುಂಬಳಕುಂಟೆ ಗ್ರಾಮದ ಸನಂ 210ಎ/2. 224. 258. 259. 266ಎ/2. 266ಎ/3. 266ಬಿ. 267ಬಿ/3. 267ಸಿ. ವಿಸ್ತೀರ್ಣ 6-55. 2-80. 4-29. 4-39. 0-08. 1-40. 2-24. 0-15. 0-40. ಎಕ್ರೆ ಜಮೀನುಗಳನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಹಿರೇಕುಂಬಳಕುಂಟೆ ಗ್ರಾಮದ ಸನಂ 210ಎ/2. 224. 258. 259. 266ಎ/2. 266ಎ/3. 266ಬಿ. 267ಬಿ/3. 267ಸಿ. ವಿಸ್ತೀರ್ಣ 6-55. 2-80. 4-29. 4-39. 0-08. 1-40. 2-24. 0-15. 0-40. ಎಕ್ರೆ ಜಮೀನುಗಳನ್ನು ಸದರಿ ತಾಲೂಕು ದಾಸರೋಬನಹಳ್ಳಿ ಗ್ರಾಮದ ಮಾಳ್ಗಿ ಚಂದ್ರಪ್ಪ ತಂದೆ ಲೇಟ್ ಮಾಳ್ಗಿ ಸಿದ್ದಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಹಿರೇಕುಂಬಳಕುಂಬಳಕುಂಟೆ ಇವರು ನಮೂನೆ-21 ರ ನೋಟಿಸನ್ನು ದಿನಾಂಕ:-09-09-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಟಿ.ಕಲ್ಲಹಳ್ಳಿಗೊವಿಂದಪ್ಪ ತಂದೆ ನಂಜುಂಡಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್ ನಂ:03/2015-16. ದಿನಾಂಕ:01-10-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದೆಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 29-12-2015 ರಿಂದ 05-04-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆಯ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ತಕರಾರುದಾರರು ಗೈರು ಹಾಜುರಾಗಿರುತ್ತಾರೆ. ಅರ್ಜಿದಾರರು ಹಿರೇಕುಂಬಳಕುಂಟೆ ಗ್ರಾಮದ ಸನಂ 210ಎ/2. 224. 258. 259. 266ಎ/2. 266ಎ/3. 266ಬಿ. 267ಬಿ/3. 267ಸಿ. ವಿಸ್ತೀರ್ಣ 6-55. 2-80. 4-29. 4-39. 0-08. 1-40. 2-24. 0-15. 0-40. ಎಕ್ರೆ ಜಮೀನುಗಳು ನಮ್ಮ ತಂದೆಯವರಾದ ಮಾಳ್ಗಿ ಸಿದ್ದಪ್ಪ ತಂದೆ ಅಜ್ಜಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟ ಇರುತ್ತದೆ. ಇವರು ದಿನಾಂಕ: 21-03-2000 ರಂದು ಹಾಗೂ ನಮ್ಮ ತಾಯಿಯವರಾದ ಮಾಳ್ಗಿ ಕೆಂಗಮ್ಮ ಗಂಡ ಸಿದ್ದಪ್ಪ ಇವರು ದಿನಾಂಕ:15-09-2004 ರಂದು ಹಾಗೂ ನಮ್ಮ ತಂಗಿಯಾದ ರಾಜಮ್ಮ ಗಂಡ ಲೇಟ್ ಚಿತ್ತಪ್ಪ ಇವರು ದಿನಾಂಕ 21-09-1990 ರಂದು ನಿಧನ ಹೊಂದಿರತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ನಮ್ಮಗಳ ಹೆಸರಲ್ಲಿ ಜಂಟಿಯಗಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಗೈರು ಹಾಜುರಾಗಿರುತ್ತಾರೆ. ಅವರು ತಕರಾರು ಅರ್ಜಿ ಮಾತ್ರ ಸಲ್ಲಿಸಿದ್ದು ವಿಚಾರಣೆಗೆ ನೋಟಿಸ್ಸು ಜಾರಿ ಮಾಡಲಾಗಿ ಅವರು ಹಾಜರಾಗಿ ತಮ್ಮ ತಕರಾರು ಬಗ್ಗೆ ಯಾವುದೇ ಹೇಳಿಕೆಗಳನ್ನಾಗಲಿ. ದಾಖಲೆಗಳನ್ನಾಗಲಿ. ಸಲ್ಲಿಸಿರುವುದಿಲ್ಲ. ಇದರಿಂದ ಅವರಿಗೆ ಈ ಬಗ್ಗೆ ಆಸಕ್ತಿ ಇಲ್ಲವೆಂದು ಕಂಡು ಬರುತ್ತದೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ತಕರಾರುದಾರರಿಗೆ ತಕರಾರುದಾರರು ವಿಚಾರಣೆಗೆ ಗೈರು ಹಾಜುರಾಗಿರುತ್ತಾರೆ. ಇದರಿಂದ ಅವರಿಗೆ ಈ ಬಗ್ಗೆ ಆಸಕ್ತಿ ಇಲ್ಲವೆಂದು ಕಂಡು ಬಂದ ಕಾರಣ ಅವರ ತಕರಾರು ಅರ್ಜಿಯನ್ನು ತಳ್ಳಿ ಹಾಕಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಸ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಹಿರೇಕುಂಬಳಕುಂಟೆ ಗ್ರಾಮದ ಸನಂ 210ಎ/2. 224. 258. 259. 266ಎ/3. 266ಬಿ. 267ಬಿ/3. 267ಸಿ. ವಿಸ್ತೀರ್ಣ 6-55. 2-80. 4-29. 4-39. 1-40. 2-24. 0-15. 0-40. ಎಕ್ರೆ ಜಮೀನುಗಳನ್ನು ಮತ್ತು ಸನಂ 266ಎ/2. ವಿಸ್ತೀರ್ಣ 0-08 ಸೆಂಟ್ಸು ಜಮೀನಿನಲ್ಲಿ ಮಾಳ್ಗಿ ಸಿದ್ದಪ್ಪ ತಂದೆ ಅಜ್ಜಪ್ಪ ಇವರ ಹೆಸರನ್ನು ಕಡಿಮೆ ಮಾಡಿ ಪೂರ್ವ ಪಟ್ಟದಾರರ ಜೊತೆ ಜಂಟಿಯಾಗಿ ಪೋತಿವಾರಸು ಪ್ರಕಾರ ಅರ್ಜಿದಾರರಾದ ಮಾಳ್ಗಿ ಚಂದ್ರಪ್ಪ ತಂದೆ ಲೇಟ್ ಮಾಳ್ಗಿ ಸಿದ್ದಪ್ಪ. ಮಾಳ್ಗಿ ಭೀಮಪ್ಪ ತಂದೆ ಲೇಟ್ ಮಾಳ್ಗಿ ಸಿದ್ದಪ್ಪ ಇವರುಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 05-04-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ನಾಡಕಛೇರಿ ಹೊಸಹಳ್ಳಿ
ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಮಾಳ್ಗಿ ಚಂದ್ರಪ್ಪ ತಂದೆ ಲೇಟ್ ಮಾಳ್ಗಿ ಸಿದ್ದಪ್ಪ ಹಾಗೂ ಇತರರು ದಾಸರೋಬನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಗೋವಿಂದಪ್ಪ ತಂದೆ ನಂಜುಂಡಪ್ಪ ಟಿ.ಕಲ್ಲಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕೆ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ರತದೆ.

8/5/16